ಈ) ರಾಜ್ಯದಲ್ಲಿ ಅಮುಲ್ ಮಾದರಿಯ ಯೋಜನೆಯನ್ನು ತೆರೆಯಬೇಕೆಂಬ ಗುರಿಯನ್ನು ಹೊಂದಲಾಗಿದೆಯೇ,

ಉ) ಹಾಗಿದ್ದಲ್ಲಿ ಈ ಬಗ್ಗೆ ಸಾಧಿಸಿರುವ ಪ್ರಗತಿ ಏನು,

ಶ್ರೀ ಸಿದ್ದರಾಮಯ್ಯ(ಪಶುಸಂಗೋಪನಾ ಹಾಗೂ ಪಶುವೈದ್ಯ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೩ರ ಗಣತಿಯ ಪ್ರಕಾರ ಜಾನುವಾರುಗಳ ಸಂಖ್ಯೆ. ೨.೬೧,೪೮, ೩೮೫ ಹಸುಗಳ ಸಂಖ್ಯೆ. ೩೯,೩೩,೫೮೩

ಎಮ್ಮೆಗಳ ಸಂಖ್ಯೆ. ೨೦,೨೬,೨೦೫

ಆ) ದಿನವೊಂದಕ್ಕೆ ೫೦೩೮ ಟನ್ನುಗಳಷ್ಟು ಅಂದಾಜು ಹಾಲು ಉತ್ಪಾದನೆಯಾಗುವ ನಿರೀಕ್ಷೆ ಇದೆ. ಹಸುಗಳಿಂದ. ೨೬೧೫ ಟನ್ನುಗಳು.

ಎಮ್ಮೆಗಳಿಂದ. ೨೩೨೩ ಟನ್ನುಗಳು.

ಇ) ೧೯೮೫ನೇ ಸಾಲಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ದಿನವೊಂದಕ್ಕೆ ಸರಾಸರಿ ೪೫೯ ಟನ್ನುಗಳಷ್ಟು ಸರಬರಾಜು ಮಾಡಲಾಗಿದೆ.

ಈ) ಹೌದು.

ಉ) ಜನವರಿ ೧೯೮೬ ಅಂತ್ಯದವರೆಗೆ ೧೫೦೦ ಮಾದರಿಯ ೨೯೭೮ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸಂಘಟಿಸಲಾಗಿದೆ ಮತ್ತು ೨೬೭೫ ಸಂಘಗಳು ಕಾರ್ಯಾಚರಣೆ ನಡೆಸುತ್ತಿವೆ.

ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳ ಬಗ್ಗೆ.

೧೯೩೬. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದಲ್ಲಿರುವ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳನ್ನು ಒಂದು ಮಾಡಲು ಸರ್ಕಾರ ಗಮನ ಹರಿಸುವುದೇ ?

ಆ) ಭಾನುವಳ್ಳಿ ಗ್ರಾಮದಲ್ಲಿರುವ ೧ ರಿಂದ ೭ನೇ ತರಗತಿವರೆವಿಗೆ ನಡೆಯುತ್ತಿರುವ ಮತ್ತು ನಡೆಸುತ್ತಿರುವ ಶಾಲೆಗಳನ್ನು ಒಂದು ಗೂಡಿಸಬೇಕೆಂದು ಇಲಾಖಾ ಪತಿಯಿಂದ ಅನುಮೋದನೆ ಕಳುಹಿಸಿದ್ದರೂ ಸರ್ಕಾರದವರು ಇದುವರೆವಿಗೂ ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು ?

ಇ) ಒಟ್ಟು ಗೂಡಿಸಿ ಒಬ್ಬ ಪದವೀಧರ ಮುಖ್ಯೋಪಾಧ್ಯಾಯರನ್ನು ನೇಮಿಸಬೇಕೆಂದು ಇದುವರೆವಿಗೂ ಕೇಳುತ್ತಾ ಬಂದಿದ್ದರೂ ಸರ್ಕಾರದವರು ಕ್ರಮ ತೆಗೆದುಕೊಳ್ಳದೇ ಇರಲು ಕಾರಣವೇನು ?

ಈ) ೧೯೮೬-೮೭ನೇ ಸಾಲಿನಿಂದಾದರೂ ಒಂದುಗೂಡಿಸಿ ಪದವೀಧರ ಮುಖ್ಯೋಪಾಧ್ಯಾಯರನ್ನು ನೇಮಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿಗಳು).—

ಅ) ಪರಿಶೀಲಿಸಲಾಗುವುದು.

ಆ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಒಟ್ಟು ಗೂಡಿಸಿದ ನಂತರ ಮುಖ್ಯೋಪಾಧ್ಯಾಯರ ಹುದ್ದೆ ಮಂಜೂರು ಮಾಡಲು ಸರ್ಕಾರೀ ಆಜ್ಞೆ ಹೊರಡಿಸಲಾಗುವುದು.

ಈ) ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.